# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 Zone 1, R. I. Dist. 3182 Charter Date : 04-03-1986




Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura


Volume 40 Issue - 16 23rd October 2025


ವಿಷಯ :

## ಸಮಾಜ ಸೇವೆಯಲ್ಲಿ ಸಂಘ ಸಂಸ್ಥೆಗಳ ಪಾತ್ರ

ಮುಖ್ಯ ಅತಿಥಿ :

**ಪ್ರೊ. ಡಾ. ರಾಜೇಂದ್ರ ನಾಯಕ್**
ಪ್ರಾಂಶುಪಾಲರು,
ಲಕ್ಷ್ಮೀ ಸೋಮ ಬಂಗೇರ ಪ್ರಥಮ ದರ್ಜೆ ಕಾಲೇಜು,
ಪಡುಕರೆ, ಕೋಟ

Time : 7.00 p.m.
Venue : Hotel Shivaprasad Grand, Kundapura

## ಸಂಪಾದಕೀಯ :



ರೋಟರಿ ಬಂಧುಗಳೇ

ಮೊನ್ನೆ ನಡೆದ ಕ್ಲಬ್ ಅಸ್ಸೆಂಬ್ಲಿಯಲ್ಲಿನ ನಡಾವಳಿ ನನ್ನ ಮನಸ್ಸಿನಲ್ಲಿ ಅತ್ಯಂತ ಚಿಂತನೆಯನ್ನು ಉಂಟುಮಾಡಿತು. ಮೊದಲಿಗೆ 2028–29 ರ ಸಾಲಿನ ರೋಟರಿ ಜಿಲ್ಲೆ 3182 ರ ಗವರ್ನರ್ ಚುನಾವಣೆಯಲ್ಲಿ ಸ್ಪರ್ಧಿಸಲು ಹಿರಿಯ ಉತ್ಸಾಹಿ ಹಾಗೂ ಸ್ನೇಹ ಪ್ರಿಯ ರೊ. ಡಾ। ಉಮೇಶ್ ಪುತ್ರನ್ ನಮ್ಮ ಕ್ಲಬ್ಬಿನಿಂದ ಆಯ್ಕೆ ಆಗಿರುತ್ತಾರೆ ಹಾಗೂ ಅವರಿಗೆ ಜಾಸ್ಮಿನ್ ಬಳಗದ ಪರವಾಗಿ ತುಂಬು ಹೃದಯದ ಅಭಿನಂದನೆಗಳು ಹಾಗೂ ಶುಭ ಹಾರೈಕೆಗಳು.

ಮಿತ್ರರೇ, ಈ ತ್ಯಾಗ ಅನ್ನುವ ಪದ ಮಾತಾಡಲು ಸುಲಭ, ಇನ್ನೊಬ್ಬರಿಗೆ ತಿಳಿಹೇಳಲು ಸುಲಭ. ಆದರೆ ಅದನ್ನು ಸ್ವತಹ ಅನುಭವಿಸಿ ಮಾತಾಡುವುದು ಬಹಳ ಕಷ್ಟ. ಅಂದು ರೊ. ಕೆ.ಕೆ. ಕಾಂಚನ್ ಅವರ ಭಾಷಣ ಎಷ್ಟೊಂದು ಭಾವನಾತ್ಮಕವಾಗಿತ್ತೆಂದರೆ ನಾವೆಲ್ಲ ಕಟ್ಟಿದ ಸುಂದರ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ನನ್ನೊಬ್ಬನ ಆಕಾಂಕ್ಷೆಗಾಗಿ ಇಬ್ಭಾಗವಾಗಬಾರದು. ಈ ಕ್ಲಬ್ ಎನ್ನುವುದು ಯಾವತ್ತೂ ತಲೆತಗ್ಗಿಸಬಾರದು. ಈ ಕ್ಲಬ್ಬಿಂದ ಮತ್ತೋರ್ವ ಗವರ್ನರ್ ಈ ಜಿಲ್ಲೆಗೆ ಸಿಗುವಂತಾಗಲಿ ಎಂದು ತಮ್ಮ ನಾಮ ಪತ್ರ ಸಲ್ಲಿಸುವ ನಿಲುವನ್ನು ವಾಪಸ್ಸು ಪಡೆದುಕೊಂಡರು. ಅಂದು ಈರ್ವ ಕವಿಗಳ ಕವಿತೆಗಳ ಸಾಲು ನೆನಪಾಗಿತ್ತು. ವೈದೇಹಿ ಅವರ ಕುಂದಾಪುರದ ಭಾಷೆಯಲ್ಲಿನ ಹಾಡು

"ಮಾತಾಡಿದ್ದ್ ಕಡಲ್ ಹಾಂಗೆ, ನುಡಿದಿದ್ದು ಮುಗಿಲ್ ಹಾಂಗೆ,
ಹೇಳಿದ್ ಆಕಾಶದ್ ನೀಲಿ ಹಾಂಗೆ,
ನಕ್ಷತ್ರ ಶಬ್ದಿಲ್ದೆ ಅಂಬರ್ದಾಗ್ ಹಾದಾಂಗೆ – ಮಾತಾಡದ್ ಬೆಳಕ್ ಹರಿದ್ ಸುರಿದಾಂಗೆ"

ಇಂಥಾ ಒಂದು ಕಲ್ಪನೆಯನ್ನು ನನಗೆ ಕೊಟ್ಟಿತ್ತು. ನಮ್ಮ ರೋಟರಿಯಲ್ಲಿ ಸರ್ವ ಸದಸ್ಯರೂ ಇವರ ಮಾತು ಕೇಳಿ ಹೃದಯದಿಂದ ಕರತಾಡನ ಮಾಡಿದಾಗಂತೂ ನಮ್ಮಂಥ ಸದಸ್ಯರ ಸ್ಥಿತಿ ಎಚ್ ಎಸ್. ವೆಂಕಟೇಶ್ ಮೂರ್ತಿ ಅವರ "ಮಳೆಸುರಿದು ಹಗುರಾದ ಮುಗಿಲಿನಂತೆ" ಎಂಬ 'ಇರಬೇಕು ಇರುವಂತೆ' ಎಂಬ ಕವಿತೆಯನ್ನು ಜ್ಞಾಪಿಸಿತು. ಮತ್ತೊಮ್ಮೆ ರೊ. ಡಾ। ಉಮೇಶ್ ಪುತ್ರನ್ ಮುಖಾಂತರ ನಮ್ಮ ಕ್ಲಬ್ಬಿನಿಂದ ಮತ್ತೋರ್ವ ಗವರ್ನರ್ ಈ ಜಿಲ್ಲೆಗೆ ಸಿಗುವಂತಾಗಲಿ ಎಂದು ಹಾರೈಸುತ್ತೇನೆ.

**– ರೊ. ರಮಾನಂದ ಕಾರಂತ್**

---

## ವಾರದ ಸಭೆಯ ವರದಿ




ತಾರೀಕು 16 ಅಕ್ಟೋಬರ್ ಗುರುವಾರದಂದು ನಡೆದ ನಮ್ಮ ಕ್ಲಬ್ಬಿನ ಕ್ಲಬ್ ಅಸೆಂಬ್ಲಿಯಲ್ಲಿ ರೊ. ಕೃಷ್ಣ ಕಾಂಚನ್ ಅವರು ತಾವು ಮುಂಬರುವ 2028 – 29 ರ ಸಾಲಿನ ಗವರ್ನರ್ ಎಲೆಕ್ಷನ್‌ನಲ್ಲಿ ಸ್ಪರ್ಧಿಸುವುದಿಲ್ಲ ಹಾಗೂ ನಮ್ಮ ಸಂಸ್ಥೆಯಿಂದ ರೊ. ಡಾ. ಉಮೇಶ್ ಪುತ್ರನ್ ಅವರು ಸ್ಪರ್ಧಿಸಲಿದ್ದಾರೆ ಹಾಗೂ ಕ್ಲಬ್ಬಿನ ಸದಸ್ಯರೆಲ್ಲರೂ ತುಂಬು ಹೃದಯದಿಂದ ಅವರನ್ನು ಬೆಂಬಲಿಸಿ ಶುಭ ಹಾರೈಸಬೇಕಾಗಿ ಕೇಳಿಕೊಂಡರು. ರೊ. ಡಾ. ಉಮೇಶ್ ಪುತ್ರನ್ ಅವರು ತಾವು ಮುಂಬರುವ 2028– 29ರ ಸಾಲಿನ ಗವರ್ನರ್ ಚುನಾವಣೆಯಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ವತಿಯಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ ಹಾಗೂ ತಾನು ಸ್ಪರ್ಧಾ ಕಣದಲ್ಲಿ ಇಲ್ಲ ಜೊತೆಗೆ ನನ್ನನ್ನು ಮುಂಬರುವ ಚುನಾವಣೆಯಲ್ಲಿ ಹುರಿದುಂಬಿಸಿ ಬೆಂಬಲಿಸಿದ ಶ್ರೀಯುತ ರೊ. ಕೆ. ಕೆ. ಕಾಂಚನ್ ಅವರನ್ನು ಕೊಂಡಾಡಿ ವಂದಿಸಿದರು. ಶ್ರೀಯುತ ರೊ. ಡಾ. ಪುತ್ರನ್ ಅವರು ಸಮಸ್ತ ಕ್ಲಬ್ಬಿನ ಸದಸ್ಯರಲ್ಲಿ ತಮಗೆ ಮುಂಬರುವ ಚುನಾವಣೆಗೆ ಬೆಂಬಲಿಸಿ ಉತ್ಸಾಹವನ್ನು ತುಂಬಬೇಕೆಂದು ಕೋರಿಕೊಂಡರು. ಅಂದಿನ ಕಾರ್ಯಕ್ರಮದ ಸಭಾಸದರಾದ ಮಾಜಿ ಜಿಲ್ಲಾ ಗವರ್ನರ್ ರೊ. PDG ಅಭಿನಂದನ್ ಎ. ಶೆಟ್ಟಿ ಅವರು ಮಾತನಾಡುತ್ತ ಗವರ್ನರ್ ಎಲೆಕ್ಷನ್ ಯಾವ ರೀತಿ ಇರುತ್ತದೆ ಅವಿರೋಧ ಆಯ್ಕೆ ಹೇಗಾಗುತ್ತದೆ ಹಾಗೂ ಸಂಸ್ಥೆಯಿಂದ ಚುನಾವಣಾ ಕಣಕ್ಕೆ ಮುಂದಡಿ ಇಟ್ಟ ರೊ. ಡಾ. ಉಮೇಶ್ ಪುತ್ರನ್ ಅವರಿಗೆ ಶುಭ ಹಾರೈಸಿದರು ಜೊತೆಗೆ ತಾನು ಸ್ಪರ್ಧಾಕಣದಲ್ಲಿಲ್ಲ ಎಂದು ರೊ. ಡಾ. ಉಮೇಶ್ ಪುತ್ರನ್ ಅವರನ್ನು ಬೆಂಬಲಿಸಿದ ರೊ. ಕೆ ಕೆ ಕಾಂಚನ್ ಅವರನ್ನು ಅಭಿನಂದಿಸಿದರು ಹಾಗೂ ತಮ್ಮ ಕೃತಜ್ಞತೆಯನ್ನು ತಿಳಿಸಿದರು. ಆಗಮಿಸಿದ ಸರ್ವರನ್ನು ಅಧ್ಯಕ್ಷ









ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ನಂದಾ ನಾಯಕ್ ವಾರದ ಚಿಂತನೆ ಮಂಡಿಸಿದರು. ರೊ. ಜುಡಿತ್ ಮೆಂಡೋನ್ಸಾ ರೋಟರಿ ಮಾಹಿತಿ ತಿಳಿಸಿದರು. ರೊ. ಸತ್ಯನಾರಾಯಣ ಪುರಾಣಿಕ್ ಕೊನೆಯಲ್ಲಿ ತಮ್ಮ ಹಾಸ್ಯ ಚಟಾಕಿಯಿಂದ ಸಭೆಯನ್ನು ನಗೆಯಲ್ಲಿ ತೇಲಿಸಿದರು. ರೊ. ಶ್ರೀನಿವಾಸ್ ಶೇಟ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವು ರೊ. ದೋಮಾ ಚಂದ್ರಶೇಖರ್ ಅವರ ಧನ್ಯವಾದಗಳೊಂದಿಗೆ ಮುಕ್ತಾಯಗೊಂಡಿತು.







ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಉಡುಪಿ ಸಹಯೋಗದಲ್ಲಿ ಗ್ರಾಮೀಣ ಉಚಿತ ವೈದ್ಯಕೀಯ ಶಿಬಿರ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ 24 ವೈದ್ಯರ ತಂಡವು ಸುಮಾರು 200 ರೋಗಿಗಳನ್ನು ಪರೀಕ್ಷಿಸಿ, 50 ಕ್ಕೂ ಹೆಚ್ಚು ಉಚಿತ ಇಸಿಜಿ, 50 ಕ್ಕೂ ಹೆಚ್ಚು ಮೂಳೆ ಖನಿಜ ಸಾಂದ್ರತೆ ಪರೀಕ್ಷೆ ಹಾಗೂ 150 ಕ್ಕೂ ಹೆಚ್ಚು ರಕ್ತ ಪರೀಕ್ಷೆಯನ್ನು ಮಾಡಲಾಯಿತು. ಸುಮಾರು ರೂ. 20,000/– ಮೌಲ್ಯದ ಔಷಧಗಳನ್ನು ಉಚಿತವಾಗಿ ವಿತರಿಸಲಾಗಿದೆ



**Grand Birthday celebration of Rtn. Shreenath Rao and Rtn. Sathyanarayan Puranik at Shivaprasad Grand. both the Birthday boys has organised morning tiffin to all club members**

ಯಾರಿಗಾದರೂ ಏನಾದರೂ
ಕೊಡಬೇಕು ಅಂತ ನಿಮಗೆ
ಅನಿಸಿದರೆ,
ಅವರಿಗೆ ಅದರ ಬೆಲೆ ಗೊತ್ತಿದ್ದರೆ
ಮಾತ್ರ ಕೊಡಿ...
ಅದನ್ನು ಉಳಿಸಿಕೊಳ್ಳುವ ರೀತಿ
ಅವರಿಗೆ ಗೊತ್ತಿರಬೇಕು!
ಇಲ್ಲವಾದರೆ,
ನೀವು ಕೊಟ್ಟ ವಸ್ತುವಿಗೆ ಬೆಲೆ
ಇಲ್ಲವಾದೀತು...



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath
1995-96



Rtn. B. C. Somayaji
1997-98



Rtn. S. Subraya Halambi
1999-2000



Rtn. K. Seetharama Nackathaya
2001-02




Rtn. Dr. Umesh Puthran
2003-04



Rtn. A. Shantharam Pai
2005-06

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 28–10–2025ನೇ ಮಂಗಳವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ರಾಘವೇಂದ್ರ ಭಟ್ ಮತ್ತು ಆ್ಯನ್ ನಯನ ಆರ್. ಭಟ್ ಇವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು.

**ಮೊಬೈಲ್ : 9448151855**

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಸುಮಾ ಪುತ್ರನ್**

**ದಿನಾಂಕ : ಅಕ್ಟೋಬರ್ 30**

**ಮೊಬೈಲ್ : 9449802010**




**Birthday Celebration of
Rtn. Mahendra Shetty and Rtn. Jerald Crasto**

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

ನಿಮ್ಮ ಭವಿಷ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ನಿಮ್ಮಿಂದ ನಿಮ್ಮ ಹವ್ಯಾಸಗಳನ್ನು ಬದಲಿಸಲು ಸಾಧ್ಯವಿದೆ. ನಿಮ್ಮ ಹವ್ಯಾಸಗಳು ನಿಮ್ಮ ಭವಿಷ್ಯವನ್ನು ಖಂಡಿತ ಬದಲಾಯಿಸುತ್ತವೆ.

– ಡಾ. ಎ. ಪಿ. ಜೆ. ಅಬ್ದುಲ್ ಕಲಾಂ

*This Bulletin is sponsored by :*

**Rtn. K. T. Surendranath
Mob. : 9880477460**

For Private Circulation only

Email id – rotaryclub.kundapurasouth@gmail.com



Rtn. S. Sadananda Chatra
1996-97



Rtn. K. Suresh Kamath
1998-99



Rtn. S. Vijaya Shetty
2000-01



Rtn. U. S. Shenoy
2002-03



Rtn. Dr. B. V. Udupa
2004-05



Rtn. K. Shantharam Prabhu
2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25